ಇ. ಅಂಥ ಸಮುದಾಯಗಳ ಕೆಲವೇ ಕೆಲವು ಜಮೀನುಗಳು ಉಳಿದುಕೊಂಡದ್ದು ಉಪ ಜೀವನಕ್ಕೆ ನೀರಾವರಿ ಮಾಡಬಯಸಿದ್ದರೂ ಕೊಳವೆಬಾವಿಗಳ ಕೊರತೆಯಿಂದ ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರ ಗಮನಿಸಿದೆಯೇ?

ಈ. ಹಾಗಿದ್ದಲ್ಲಿ ಅವರಿಗಾಗಿ ಹೆಚ್ಚುವರಿ ವೈಯಕ್ತಿಕ ನೀರಾವರಿ ಕೊಳವೆಬಾವಿಗಳನ್ನು ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ ಸಮೂಹ ನೀರಾವರಿ ವ್ಯವಸ್ಥೆಗಾಗಿ ಪ್ರಸಕ್ತ ವರ್ಷ ನೀಡಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಹೌದು

ಆ. ಹೌದು

ಇ. 2001-02ನೇ ಸಾಲಿನಲ್ಲಿ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ 31 ಕೊಳವೆಬಾವಿಗಳನ್ನು ಮತ್ತು ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ 20 ಕೊಳವೆಬಾವಿಗಳನ್ನು ಕೊರೆಯಲಾಗಿದೆ.

ಈ. 2002-03ನೇ ಸಾಲಿನಲ್ಲಿ ಅಯವ್ಯಯದ ಹಂಚಿಕೆಯಂತೆ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮುಖಾಂತರ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿಯಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ - 4 ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ - 3 ಮತ್ತು ಗಂಗಾ ಕಲ್ಯಾಣ ಯೋಜನೆಯಡಿ ಬಾಗಲಕೋಟೆ-2, ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮುಖಾಂತರ ಬಾಗಲಕೋಟೆ ಮತ್ತು ಬೀಳಗಿ ಕ್ಷೇತ್ರಗಳಲ್ಲಿ ತಲಾ 2 ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಲ್ಲಿ ಕೊಳವೆಬಾವಿಗಳನ್ನು ಕೊರೆಯಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಕುಸಿತ

108(134): ಶ್ರೀ ಶಂಕರಲಿಂಗೇಗೌಡ ಎಸ್. (ಚಾಮರಾಜ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಅಂತರ್ಜಲ ಕಡಿಮೆಯಾಗಿದೆ ವಿವರ ನೀಡುವುದು,

ಆ. ಇದು ತೀವ್ರವಾದ ಕಳವಳಕಾರಿಯಾದ ವಿಷಯವಲ್ಲವೇ,

ಇ. ಹಾಗಿದ್ದಲ್ಲಿ ಸರ್ಕಾರ ಈ ಕುರಿತು ಈಗಾಗಲೇ ಕೈಗೊಂಡಿರುವ ಕ್ರಮಗಳೇನು, ಮುಂಚಿ ಕೈಗೊಳ್ಳಬಹುದಾದ ಕ್ರಮಗಳೇನು?

ಶ್ರೀ ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. ಅಂತರ್ಜಲ ಮಟ್ಟ ಕುಸಿಯುತ್ತಿರುವ ತಾಲ್ಲೂಕುಗಳ ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.

ಆ. ಹೌದು.

ಇ. ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ವೃದ್ಧಿಗೊಳಿಸುವ ಸಲುವಾಗಿ, ಇಲಾಖೆಯ ರಾಜ್ಯದ ಕ್ಲಿಷ್ಟಕರವೆಂದು ಘೋಷಿಸಿರುವ ತಾಲ್ಲೂಕುಗಳಲ್ಲಿ ಹರಿದು ಹೋಗುತ್ತಿರುರ ಮಳೆಯ ನೀರನ್ನು ತಡೆದು ಭೂಮಿಯಲ್ಲಿ ಇಂಗುವಂತೆ ಮಾಡುವುದು ಮುಖ್ಯ ಕಾರ್ಯಕ್ರಮಗಳಾಗಿದೆ. ಅಂತರ್ಜಲ ಕೃತಕ ಮರು ಪೂರೈಕೆಯ ರಚನೆಗಳಾದ ಜೆಕ್ ಡ್ಯಾಂ, ಇಂಗು ಬಾವಿ, ಕೃತಕ, ಬೈಕ್, ಗೋ ಕಟ್ಟೆಗಳಲ್ಲಿ ಹೂಳು ತೆಗೆಯುವುದು ಇತ್ಯಾದಿ ಕಾಮಗಾರಿಗಳನ್ನು 1995-96ನೇ ಸಾಲಿನಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಅಂತರ್ಜಲ ಮಟ್ಟವನ್ನು ವೃದ್ಧಿಗೊಳಿಸುವ ಸಲುವಾಗಿ ವಿವಿಧ ಜಿಲ್ಲೆಗಳಲ್ಲಿ ಇದುವರೆವಿಗೆ ಒಟ್ಟು 634 ರಚನೆಗಳನ್ನು ನಿರ್ಮಾಣ ಮಾಡಲಾಗಿದೆ ವಿವರಗಳನ್ನು ಅನುಬಂಧ -2ರಲ್ಲಿ ಒದಗಿಸಲಾಗಿದೆ.ರಾಜ್ಯದಾದ್ಯಂತ ಅಂತರ್ಜಲವನ್ನು ವೃದ್ಧಿಪಡಿಸುವ ಸಲುವಾಗಿ ಜಲಸಂಪನ್ಮೂಲ ಕ್ರೋಢಿಕರಣ ಯೋಜನೆ (Water Resources Consolidation Project Group Water Component) ವಿಶ್ವಬ್ಯಾಂಕ್ ನೆರವಿನಿಂದ ರೂ. 471 ಕೋಟಿ ವೆಚ್ಚದಲ್ಲಿ ಒಟ್ಟು 58 ತಾಲ್ಲೂಕುಗಳಲ್ಲಿ 50221 ಸಂಖ್ಯೆಯ ವಿವಿಧ ರಚನೆಗಳನ್ನು ನಿರ್ಮಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಅತಿಯಾಗಿ ಅಂತರ್ಜಲವನ್ನು ತೆಗೆಯುವುದನ್ನು ನಿಷೇಧಿಸಲು ಅನುವಾಗುವಂತೆ, ಒಂದು ಕಾಯ್ದೆಯನ್ನು ಜಾರಿಗೆ ತರಲು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತಿವೆ.

STATUS OF GROUND WATER DEVELOPMENT OF THE TALUKS WHICH ARE CONSIDERED AS CERTICAL BLOCKS

Sl.	Name of the District	Grey taluk	Dark taluk	Ramarks
1.	Bangalore Urban		Ankel, Hoskote Bangalore North Channapatna Bangalore South Davanahally	
2.	Bangalore Rural	Doddapallapur Ramnagar		
3.	Belgaum	Athani Bailhongal	Chikkodi Hukkeri	
4.	Bellary	Hagaribomman ahalli		

5. Bidar	Bidar	
6. Bijapur	Bagewadi Bijapur	Indi
7. Chitradurga	Challakere Chitradurga	
8. Dakshinakannada	Belthanagadi	Bantwal Sulya
9. Hassan	Arasikere	Channarayaparna
10. Kolar	Chintamani Gowribidanur Mulgabal Shidlaghatta Srinivasapur	Chikkaballapur Koalr Malur
11. Chamarajnagar	Chamarajnagar	Kollegal
12.Koppal	Kustagi	
13. Tumkur	Koratagere Kunigal Sira	Gubbi Madhugiri Tiptur Tumkur Turuvekere
Total	**22**	**21**

DISTRICT WISE DETAILS OF ARTIFICIAL RECHARGE STRUCTURES

(1995-96 TO 2001-2002)

Sl.	District	Details	
		No. of the Structures	Expenditure (Rs. In Lakhs)
1.	Bangalore	122	152.35
2.	Belgaum	62	69.43
3.	Bellary	28	25.22
4.	Bidar	40	36.74
5.	Bijapur	4	3.00

6.	Chamarajanagar	40	20.21
7.	Chickmagalur	3	7.94
8.	Chitradurga	79	56.39
9.	Dakshina Kannada	3	3.94
10.	Dharwad	3	2.85
11.	Gulbarga	9	2.00
12.	Hassan	34	29.35
13.	Kolar	64	101.02
14.	Koppal	6	5.18
15.	Mandya	17	6.87
16.	Mysore	28	19.71
17.	Raichur	19	12.59
18.	Shimoga	7	12.75
19.	Tumkur	64	58.85
20.	Uttara Kannada	2	2.00
	Total	**634**	**628.39**

ಮೈಸೂರು ಜಿಲ್ಲೆಯಲ್ಲಿರುವ ಕಾರ್ಖಾನೆಗಳಲ್ಲಿ ಕನ್ನಡಿಗರ ನೇಮಕಾತಿ

109(136): ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಮೈಸೂರು ಜಿಲ್ಲೆಯಲ್ಲಿರುವ ಭಾರೀ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರುಗಳಲ್ಲಿ ಕನ್ನಡಿಗರಿಗೆ ಹಾಗೂ ಕನ್ನಡೇತರ ಸಂಖ್ಯೆ ಎಷ್ಟು ಕಾರ್ಖಾನೆವಾರು ವಿವರ ನೀಡುವುದು.

ಆ. ಕಾರ್ಖಾನೆಗಳಲ್ಲಿ ನೇಮಕ ಮಾಡಿಕೊಳ್ಳುವಾಗ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಕಾರ್ಖಾನೆ ಆಡಳಿತ ಮಂಡಳಿಗೆ ಸೂಚನೆ ನೀಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್. ವಿ. ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಭಾರೀ ಮತ್ತು ಮಾಧ್ಯಮ ಕೈಗಾರಿಕೆಗಳಿಗೆ ರಿಯಾಯಿತಿ ಹಾಗೂ ಉತ್ತೇಜನಗಳ ಮಂಜೂರಾತಿ ನೀಡುವಾಗ ಸಿ ಮತ್ತು ಡಿ ವರ್ಗದವರಿಗೆ ಡಾ: ಸರೋಜಿನಿ ಮಹಷಿ ವರದಿಯಂತೆ ಸ್ಥಳೀಯರಿಗೆ ಉದ್ಯೋಗ ಅವಕಾಶ ನೀಡುವ ಬಗ್ಗೆ ನಿಬಂಧನೆಯನ್ನು ಹಾಕಲಾಗಿದೆ. ಅಲ್ಲದೆ ಇದರ ಬಗ್ಗೆ ಪ್ರತಿ ತಿಂಗಳು ಜಿಲ್ಲಾ ಮಟ್ಟದ ಎಕ ಗವಾಕ್ಷಿ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಅಂತಹ ಕೈಗಾರಿಕಾ ಘಟಕಗಳಿಗೆ ಕುಂದು ಕೊರತೆಗಳನ್ನು ಸರಿಪಡಿಸಲು ತಿಳಿಸಲಾಗುತ್ತದೆ.